15.	1981-82	4478.24
16.	1982-83	4087.60
17.	1983-84	4910.20
18.	1984-85	4134.98
19.	1985-86	4622.31
20.	1986-87	6000.00
21.	1987-88	4311.81
22.	1988-89	5056.52
23.	1989-90	5461.37
24.	1990-91	6459.29
25.	1991-92	6762.503
26.	1992-93	12755.96
27.	1993-94	24090.77
28.	1994-95	25156.32
	ಒಟ್ಟ ರೂ.	135169.603

ವಿಷಯ:- ರಾಜ್ಯದಲ್ಲಿ ಬಳಕೆದಾರರ ವೇದಿಕೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 4471

ಶ್ರೀ ಯು.ಆರ್.ಸಭಾಪತಿ, ಎಂ.ಎಲ್.ಎ:- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ವಿವಿಧ ಬಳಕೆದಾರರ ವೇದಿಕೆಗಳು ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಬಳಕೆದಾರರ ದೂರು ಪರಿಹಾರ ವೇದಿಕೆ ಎದುರು ಇತ್ಯರ್ಥಕ್ಕೆ ಬಾಕಿ ಇರುವ ಕೇಸುಗಳು (ದೂರು) ಎಷ್ಟು, ಕಾಯಿದೆ ಪ್ರಕಾರ ಎಷ್ಟು ದಿನಗಳಲ್ಲಿ ಕೇಸನ್ನು ಇತ್ಯರ್ಥಪಡಿಸಲಾಗುವುದು (ವಿವರ ನೀಡುವುದು)

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ಅನುಬಂಧದಲ್ಲಿ ಕೊಡಲಾಗಿದೆ.

ಆ) ವೇದಿಕೆಗಳ ಮುಂದಿರುವ ಬಾಕಿ ಇರುವ ಪ್ರಕರಣಗಳ ಮಾಹಿತಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

ಇ) ಕರ್ನಾಟಕ ಗ್ರಾಹಕ ಹಿತರಕ್ಷಣಾ ನಿಯಮಗಳು 1988ರ ನಿಯಮ 4(9)ರ ಪ್ರಕಾರ ದೂರುಗಳನ್ನು ಆ ದೂರಿನ ಮೇಲೆ ವಸ್ತುಗಳನ್ನು ಪರೀಕ್ಷೆಗೆ ಒಳಪಡಿಸಲು ಬೇಡವಾಗಿದ್ದಲ್ಲಿ ಎದುರುದಾರರಿಗೆ ನೋಟೀಸ್ ಜಾರಿಯಾದ ದಿನಾಂಕದಿಂದ ಸಾಧ್ಯವಾದಷ್ಟು ಮಟ್ಟಿಗೆ 90 ದಿನಗಳಲ್ಲಿ ಇತ್ಯರ್ಥಪಡಿಸಬೇಕಾಗಿರುತ್ತದೆ. ವಸ್ತುಗಳನ್ನು ಪರೀಕ್ಷೆಗೆ ಒಳಪಡಿಸಬೇಕಾಗಿದ್ದಲ್ಲಿ 150 ದಿನಗಳಲ್ಲಿ ಆ ದೂರನ್ನು ಇತ್ಯರ್ಥಪಡಿಸಬೇಕಾಗಿದೆ.

ಅನುಬಂಧ

ರಾಜ್ಯದಲ್ಲಿರುವ ರಾಜ್ಯ ಆಯೋಗ ಹಾಗೂ ಜಿಲ್ಲಾ ವೇದಿಕೆಗಳು ಹಾಗೂ ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳಲ್ಲಿ ಬಾಕಿ ಇರುವ ಪ್ರಕರಣಗಳ ಪಟ್ಟಿ ದಿನಾಂಕ : 31-3-96ರ ಅಂತ್ಯಕ್ಕೆ.

ಕ್ರಮ ಸಂಖ್ಯೆ	ಜಿಲ್ಲಾ ವೇದಿಕೆ ಹೆಸರು	ದಿನಾಂಕ: 31-3-96ರ ಅಂತ್ಯಕ್ಕೆ ಇತ್ಯರ್ಥಕ್ಕಾಗಿ ಬಾಕಿ ಇರುವ ಪ್ರಕರಣಗಳು
1.	ರಾಜ್ಯ ಆಯೋಗ	
	ಅ) ದೂರುಗಳು:	304
	ಆ) ಮೇಲ್ಮನವಿಗಳು:	1145
2.	ಬೆಂಗಳೂರು (ನಗರ) ಜಿಲ್ಲೆ:	4403
3.	ಬೆಂಗಳೂರು (ಹೆಚ್ಚುವರಿ):	1336
4.	ಬೆಂಗಳೂರು (ಗ್ರಾಮಾಂತರ):	45
5.	ಬೆಳಗಾಂ:	395
6.	ಬಳ್ಳಾರಿ:	86
7.	ಬೀದರ್:	206
8.	ಬಿಜಾಪುರ:	185
9.	ಚಿತ್ರದುರ್ಗ:	327

10.	ಚಿಕ್ಕಮಗಳೂರು:	445
11.	ಧಾರವಾಡ:	174
12.	ದಕ್ಷಿಣ ಕನ್ನಡ (ಮಂಗಳೂರು):	175
13.	ಗುಲ್ಬರ್ಗಾ:	197
14.	ಹಾಸನ:	169
15.	ಕೋಲಾರ:	90
16.	ಮಂಡ್ಯ:	1110
17.	ಮೈಸೂರು	89
18.	ಮಡಿಕೇರಿ (ಕೊಡಗು)	84
19.	ರಾಯಚೂರು:	296
20.	ಶಿವಮೊಗ್ಗ:	1109
21.	ತುಮಕೂರು:	235
22.	ಉತ್ತರಕನ್ನಡ (ಕಾರವಾರ)	140
	ಒಟ್ಟು :	12746

ವಿಷಯ:- ಭದ್ರ ಜಲಾಶಯದಿಂದ ಸಮರ್ಪಕ ನೀರು ನಿರ್ವಹಣೆಗದೇ ಬೆಳೆಗಳ ಹಾನಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 121

ಶ್ರೀ ಹೆಚ್.ಶಿವಪ್ಪ:- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಭದ್ರ ಜಲಾಶಯದ ಅಧಿಕಾರಿಗಳಿಂದ ಸಮರ್ಪಕ ನೀರು ನಿರ್ವಹಣೆಯಾಗದೇ ಹರಿಹರ ಮತ್ತು ದಾವಣಗೆರೆ ತಾಲ್ಲೂಕಿನಲ್ಲಿ ಭಾರಿ ಬೆಳೆ ನಷ್ಟದಿಂದಾಗಿ ರೈತರುಗಳು ನಷ್ಟ ಅನುಭವಿಸುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಹಾಗಿದ್ದಲ್ಲಿ ಆದ ಹಾನಿ ಮತ್ತು ಅನುಭವಿಸಲಾದ ನಷ್ಟದ ಪ್ರಮಾಣ.

ಇ) ಕಂದಾಯ ಇಲಾಖೆ ಅಂದಾಜಿಸಲಾದ ಆಧಾರದ ಮೇಲೆ ಬೆಳೆ ನಷ್ಟಕ್ಕೆ ಸರ್ಕಾರವು ಪರಿಹಾರವನ್ನು ನೀಡುವುದೇ?